ಅದು ಅನ್ಯಾಯ ಅಂತ ರಾಮಣ್ಣನಿಗೆ ಅನ್ನಿಸಿತು. ಇಮಾಂ ಸಾಬರ ಸಮಾಧಿ ತಂಟೆಗೆ ಹೋಗೋದು ಬೇಡ ಅಂತ ತೀರ್ಮಾನಿಸಿ ಅದನ್ನು ಪ್ರೆಸಿಡೆಂಟರಿಗೂ ಹೇಳಿ ಅವರನ್ನೂ ಒಪ್ಪಿಸಿದ.

ಆರು ತಿಂಗಳು ಉರುಳಿ ಹೋದವು. ಹೊಸ ಗುಡಿ ಕಟ್ಟೊ ವಿಷಯ ಎಲ್ಲಿಗೆ ಬಂತು? ಇಷ್ಟು ದೊಡ್ಡ ಊರಲ್ಲಿ ಅಮ್ಮನ ಗುಡಿಗೆ ಸ್ವಲ್ಪ ಜಾಗ ಕೊಡೋನು ಒಬ್ಬನೂ ಇಲ್ಲವೇ ಅಂತ ಪಂಚಾಯ್ತಿ ಮೀಟಿಂಗ್‌ನಲ್ಲಿ ಮೆಂಬರೊಬ್ಬ ಪ್ರಶ್ನೆ ಕೇಳಿದ. ಊರ ಬಾಗಿಲಲ್ಲಿ ಹನುಮಪ್ಪನ ಗುಡಿ ಪಕ್ಕ ಸಮುದಾಯ ಭವನಕ್ಕೆ ಅಂತ ಬಿಟ್ಟಿರೊ ಜಾಗದಲ್ಲಿ ಹೊಸ ಗುಡಿ ಕಟ್ಟಬೌದಲ್ಲ ಅಂತಲೂ ಹೇಳಿದ. ಉಳಿದ ಮೆಂಬರುಗಳು ಅದಕ್ಕೆ ವಿರೋಧ ವ್ಯಕ್ತಪಡಿಸಿದರು.

'ನಂಗೆ ಹೊಸ ಗುಡಿ ಕಟ್ಟಿಸಿ ಕೊಡಿ ಅಂತ ಹೊಸಳ್ಳಮ್ಮ ಬಂದು ನಮ್ಮನ್ನು ಕೇಳಿಲ್ಲ...' ಎಂದ ಅವರೆಲ್ಲ ಗುಡಿಗಿಂತ ಸಮುದಾಯ ಭವನ ಮುಖ್ಯ ಅಂತ ಪಟ್ಟುಹಿಡಿದರು.

'ಈಗ ದೊಡ್ಡ ಕಟ್ಟಡಗಳನ್ನೇ ಯಂತ್ರಗಳ ಸಹಾಯದಿಂದ ಸ್ವಲ್ಪ ದೂರಕ್ಕೆ ತಳ್ಳಬೌದಂತೆ. ಶ್ರೀರಂಗಪಟ್ಟಣದಲ್ಲಿ ಇನ್ನೂರು ವರ್ಷಗಳ ಹಿಂದಿನ ಕಟ್ಟಡಗಳನ್ನು ಸ್ವಲ್ಪ ಮುಂದಕ್ಕೆ ತಳ್ಳಿ ಅಲ್ಲೇ ರೈಲು ಹಳಿ ಹಾಕಿದರಲ್ಲ ಹಂಗೆ. ಇಮಾಂ ಸಾಬರ ಸಮಾಧಿಗಳನ್ನು ಸ್ವಲ್ಪ ದೂರಕ್ಕೆ ತಳ್ಳಬೌದು...' ಅಂತ ಯಾರೋ ಅಂದದ್ದೇ ತಡ ಅನೇಕರು ಅದನ್ನು ಎಲ್ಲರಿಗೂ ಹೇಳಿಕೊಂಡು ಓಡಾಡಿದರು.

'ನಮ್ಮ ಅಪ್ಪ ಅಮ್ಮನ ಸಮಾಧಿಗಳನ್ನು ಮುಂದಕ್ಕೆ ತಳ್ಳೋದು ನಂಗೆ ಇಷ್ಟ ಇಲ್ಲ. ಅದಕ್ಕೆ ನಾನು

